06-Dec-2010

# ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನಮ್
## ಪ್ರವಚನ ಪ್ರಶಿಕ್ಷಣ

ಸನ್ಮಾನ್ಯ ಅಧ್ಯಾತ್ಮ ಬಂಧುಗಳಲ್ಲಿ ವಿನಂತಿ.

ಇಹ–ಪರ ಜೀವನ ಸಾರ್ಥಕತೆಗೆ ಅಗತ್ಯವಾದದ್ದು ಧರ್ಮಾಚರಣೆ. ಜಗದ್ಗುರು ಶ್ರೀಶಂಕರ ಭಗವತ್ಪಾದಾಚಾರ್ಯರು ತೋರಿದ ಧರ್ಮಮಾರ್ಗದಲ್ಲಿ ಸಮಾಜವನ್ನು ಮುನ್ನಡೆಸಲು ಶಾಂಕರ ತತ್ತ್ವಪ್ರಸಾರ ಇಂದಿನ ಅಗತ್ಯ. ಈ ಕಾರ್ಯವನ್ನು ನೆರವೇರಿಸಲು ಪ್ರವಚನಕಾರರ ಆವಶ್ಯಕತೆಯಿದೆ.

ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀಭಾರತೀತೀರ್ಥ ಮಹಾಸ್ವಾಮಿಗಳವರ ಅನುಗ್ರಹದೊಂದಿಗೆ, ಪ್ರವಚನಕಾರರಿಗೆ ತರಬೇತಿಯನ್ನು ನೀಡುವ ಸಲುವಾಗಿ "ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನಂ" ಎಂಬ ಯೋಜನೆಯು ಶ್ರೀಶೃಂಗೇರಿ ಶಾರದಾಪೀಠದ ವತಿಯಿಂದ ನಡೆಸಲ್ಪಡುತ್ತಿದೆ.

ಈ ಪ್ರವಚನ ಪ್ರಶಿಕ್ಷಣದಲ್ಲಿ ಮಾಧವೀಯ ಶಂಕರ ದಿಗ್ವಿಜಯದ ಪರಿಚಯ, ಶಾಂಕರ ವೇದಾಂತ ಪರಿಚಯ, ಶಾಂಕರ ಸ್ತೋತ್ರ ಮತ್ತು ತತ್ತ್ವಬೋಧಕ ಸಾಹಿತ್ಯದ ಪ್ರವಚನ, ವಾಚನ–ವ್ಯಾಖ್ಯಾನಗಳನ್ನು ನಡೆಸಲು ಬೇಕಾದ ತರಬೇತಿಯನ್ನು ಆಸಕ್ತರಿಗೆ ನೀಡಲು ಉದ್ದೇಶಿಸಲಾಗಿದೆ. ಶೃಂಗೇರಿ, ಕೊಲ್ಲೂರು ಮತ್ತು ಬೆಂಗಳೂರುಗಳಲ್ಲಿ ನಡೆದ ಪ್ರಶಿಕ್ಷಣ ಶಿಬಿರಗಳಲ್ಲಿ ಒಟ್ಟು 160 ಮಂದಿ ತರಬೇತಿ ಪಡೆದಿದ್ದು, ಈಗ ಮೈಸೂರಿನ ಶ್ರೀಶೃಂಗೇರಿ ಶಂಕರಮಠದಲ್ಲಿ ಪ್ರವಚನಕಾರ ಪ್ರಶಿಕ್ಷಣ ಶಿಬಿರವು ಡಿಸೆಂಬರ್ ತಿಂಗಳಿನ ದಿನಾಂಕ 25 ಹಾಗೂ 26 ರಂದು ನಡೆಯಲಿದೆ. ಇದರೊಂದಿಗೆ ಅಡಕವಾಗಿರುವ ಕರಪತ್ರದಲ್ಲಿ ಈ ಕಾರ್ಯಕ್ರಮದ ವಿವರಣೆಯಿದೆ. ಪ್ರವಚನಕಾರರಾಗಬೇಕೆಂಬ ಅಪೇಕ್ಷೆಯುಳ್ಳವರು ಇದರಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಡಾ॥ ಶಿಕಾರಿಪುರ ಕೃಷ್ಣಮೂರ್ತಿ, ಮಂಗಳೂರು
(ಸಂಚಾಲಕರು)

(ಪದ್ಮಶ್ರೀ ವಿ.ಆರ್.ಗೌರಿಶಂಕರ್)
ಆಡಳಿತಾಧಿಕಾರಿಗಳು, ಶ್ರೀಶಾರದಾಪೀಠಮ್, ಶೃಂಗೇರೀ

# ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನಮ್
## ಪ್ರವಚನ ಪ್ರಶಿಕ್ಷಣ

**ಸ್ಥಳ – ಶ್ರೀ ಶೃಂಗೇರಿ ಶಂಕರ ಮಠ, ಮೈಸೂರು 570004.**
**ದಿನಾಂಕ – 25, 26  ಡಿಸೆಂಬರ್ 2010 (ಶನಿವಾರ ಮತ್ತು ಭಾನುವಾರ)**
(**ಶನಿವಾರ** ಬೆಳಗ್ಗೆ 8 ರಿಂದ ಭಾನುವಾರ ಸಂಜೆ 7 ಗಂಟೆಯವರೆಗೆ ಶಿಬಿರವು ನಡೆಯಲಿದೆ.)

**✡ ಪ್ರಶಿಕ್ಷಣದ ವಿಷಯಗಳು ✡**

✡ ವೀಯ ಶಂಕರ ದಿಗ್ವಿಜಯದ ಪರಿಚಯ, ಶ್ರೀ ಶಂಕರರ ಜೀವನ ಮತ್ತು ಸಂದೇಶ
✡ ಚಾರ್ವಾಕ, ಜೈನ, ಬೌದ್ಧ, ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ ಶಾಸ್ತ್ರಗಳು
✡ ಪೂರ್ವಮೀಮಾಂಸಾ ಮತ್ತು ವೇದಾಂತ; ಪ್ರಸ್ಥಾನತ್ರಯ
✡ ಅದ್ವೈತ ವೇದಾಂತ ಪರಿಚಯ;
✡ ಅದ್ವೈತೇತರ ಮತಗಳು
✡ ಅದ್ವೈತವನ್ನು ಕುರಿತ ಆಕ್ಷೇಪಗಳು ಮತ್ತು ಪರಿಹಾರ
✡ ಅದ್ವೈತ ಪ್ರಕರಣಗ್ರಂಥಗಳು, ಅದ್ವೈತ ದಾರ್ಶನಿಕರು
✡ ಶಾಂಕರ ಸ್ತೋತ್ರ ಸಾಹಿತ್ಯ–ಲೌಕಿಕ ಮತ್ತು ಪಾರಮಾರ್ಥಿಕ ತತ್ತ್ವಗಳು
✡ ಶೃಂಗೇರಿ ಗುರು ಪರಂಪರೆ ಮತ್ತು ಅವರಿಂದ ವಿರಚಿತ ಶಾಸ್ತ್ರ–ಸಾಹಿತ್ಯಪರಿಚಯ
✡ ಇಂದಿನ ಸಮಾಜಕ್ಕೆ ಬೇಕಾದ ಶಾಂಕರ ತತ್ತ್ವಗಳು
✡ ಪ್ರವಚನ ಕೌಶಲ

ಈ ಕುರಿತು ನಿರ್ದಿಷ್ಟ ಅವಧಿಗಳಲ್ಲಿ ಪರಿಣತರಿಂದ ಪಾಠ, ಅಗತ್ಯವಾದ ಮುದ್ರಿತ ಟಿಪ್ಪಣಿಗಳನ್ನು ಒದಗಿಸಲಾಗುವುದು. ಪ್ರಯೋಗಾಭ್ಯಾಸ, ಪ್ರಶ್ನೋತ್ತರ, ಚರ್ಚೆ ಇವುಗಳ ಮೂಲಕ ಪ್ರವಚನಮಾಡುವ ಕೌಶಲ್ಯವನ್ನು ಶಿಬಿರಾರ್ಥಿಗಳಿಗೆ ಕಲಿಸುವುದೇ ಇದರ ಉದ್ದೇಶ.

ಶಿಬಿರವು ದಿನಾಂಕ 25.12.2010 ರ ಬೆಳಿಗ್ಗೆ 08.00 ಕ್ಕೆ ಸರಿಯಾಗಿ ಪ್ರಾರಂಭವಾಗಿ ದಿನಾಂಕ 26.12.2010 ರ ಸಂಜೆ 7.00 ಗಂಟೆಯವರೆಗೆ ನಡೆಯಲಿದ್ದು, ನಿಗದಿತ ಸಮಯಕ್ಕೆ 30 ನಿಮಿಷ ಮುಂಚಿತವಾಗಿ ಸ್ಥಳದಲ್ಲಿ ಉಪಸ್ಥಿತರಿದ್ದು ತಮ್ಮ ಹೆಸರನ್ನು ನೋಂದಾಯಿಸತಕ್ಕದ್ದು.

ಈ ಪ್ರಶಿಕ್ಷಣ ಪಡೆದವರು ಮಠ, ಮಂದಿರ, ಸಂಘ, ಸಂಸ್ಥೆ, ಜಾತ್ರೆ, ರಥೋತ್ಸವ, ನಿತ್ಯ,ನೈಮಿತ್ತಿಕ, ಉತ್ಸವ, ಜಯಂತಿ, ಪ್ರವಚನ ಸಪ್ತಾಹಗಳಲ್ಲಿ, ವಿಚಾರಗೋಷ್ಠಿ, ಸಮ್ಮೇಳನ ಸಭೆಗಳಲ್ಲಿ ಪ್ರವಚನ ಅಥವಾ ವಾಚನ ವ್ಯಾಖ್ಯಾನಗಳನ್ನು ನೀಡಲು ಸಮರ್ಥರಾಗುವರು.

ಶಿಬಿರಾರ್ಥಿಗಳ ಊಟೋಪಚಾರ, ವಸತಿ, ಪ್ರಶಿಕ್ಷಣಕ್ಕೆ ಬೇಕಾದ ಸಾಹಿತ್ಯ ಸಾಮಗ್ರಿಗಳನ್ನು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಗಿದೆ.

| | |
|---|---|
| **ಶಿಬಿರವ್ಯವಸ್ಥಾಪಕರು** | ಶ್ರೀ ಹೆಚ್. ರಾಮಚಂದ್ರ, ಧರ್ಮಾಧಿಕಾರಿ, ಮೈಸೂರು **570004.** |
| | ದೂರವಾಣಿ : 0821 – 2456460 |
| **ಸಂಚಾಲಕರು** | ಡಾ॥ ಶಿಕಾರಿಪುರ ಕೃಷ್ಣಮೂರ್ತಿ, ಮಂಗಳೂರು. |
| | ದೂರವಾಣಿ : 94488 43322 |
| | ವಿದ್ವಾನ್ ಗಂಗಾಧರ ಭಟ್ಟ, ಮೈಸೂರು |
| **ಸಂಯೋಜಕರು** | ಶ್ರೀ ಸುಬ್ರಾಯ ಹೆಗಡೆ, ಶ್ರೀ ಶಂಕರ ಅದ್ವೈತ ಶೋಧ ಕೇಂದ್ರ, ಶೃಂಗೇರಿ |
| | ದೂರವಾಣಿ : 89047 28949 |

ಸೀಮಿತ ಸಂಖ್ಯೆಯ ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿದ್ದು ಈ ಪ್ರಶಿಕ್ಷಣದಲ್ಲಿ ಗಂಭೀರವಾಗಿ ಭಾಗವಹಿಸಲಿಚ್ಛಿಸುವವರು ಕೆಳಕಂಡ ಮಾಹಿತಿಯೊಡನೆ ಸಂಯೋಜಕರು ಅಥವಾ ಸಂಚಾಲಕರನ್ನು ದೂರವಾಣಿಯಲ್ಲಿ ಸಂಪರ್ಕಿಸಬೇಕು.

ಅಭ್ಯರ್ಥಿಗಳು ಹೆಸರು, ವಯಸ್ಸು, ವಿಳಾಸ, ಉದ್ಯೋಗ, ದೂರವಾಣಿ, ವಿದ್ಯಾರ್ಹತೆ, ಪ್ರವಚನ ಪರಿಣತಿ ಅಥವಾ ಹಿನ್ನೆಲೆ, ಆಸಕ್ತಿ, ಸಂಸ್ಕೃತ–ವೇದಾಂತ–ಶಾಸ್ತ್ರಗಳ ಪರಿಜ್ಞಾನ ಇವುಗಳನ್ನು ತಿಳಿಸಬೇಕು.